# ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದಿನಾಂಕ : 27–09–2017

**ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಮಹಿಳೆಯರ ಹಕ್ಕುಗಳ ಬಗ್ಗೆ ಕಾನೂನು ಅರಿವು ಕಾರ್ಯಕ್ರಮ**

**ಮಹಿಳೆಯರ ಹಕ್ಕು ಪುರುಷ ವಿರೋಧಿಯಲ್ಲ – ಶ್ರೀ ಎಸ್ ಜೆ ಕೃಷ್ಣ**

ಕೊಳ್ಳೇಗಾಲ 27–09–2017 : ಮಹಿಳಾ ಹಕ್ಕುಗಳಿಗಾಗಿ ಜಾಗೃತಿ ಹೋರಾಟವೆಂದರೆ ಅದು ಪುರುಷ ವಿರೋಧಿಯಲ್ಲ ಬದಲಿಗೆ ಪುರುಷ ಪ್ರಧಾನ ಧೋರಣೆಗಳ ವಿರುದ್ದ. ಮಹಿಳಾ ಸಮಸ್ಯೆಗಳು ಅವರಿಂದಲೇ ಬಗೆಹರಿಯಬೇಕಾದರೂ ಅಲ್ಲಿ ಪುರುಷರ ಪಾತ್ರವೂ ಮುಖ್ಯವಾಗುತ್ತದೆ ಎಂದು ಇಲ್ಲಿನ ಗೌರವಾನ್ವಿತ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರಾದ ಶ್ರೀ ಎಸ್ ಜೆ. ಕೃಷ್ಣರವರು ತಿಳಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಕೊಳ್ಳೇಗಾಲ ತಾಲ್ಲೂಕು ಕಾನೂನು ಸೇವೆಗಳ ಸಮಿತಿ ಮತ್ತು ವಕೀಲರ ಸಂಘದ ಸಹಯೋಗದೊಂದಿಗೆ ಕಾಲೇಜಿನ ''ಮಹಿಳೆಯರ ಲೈಂಗಿಕ ಕಿರುಕುಳ ತಡೆ ಸಮಿತಿ'' ವತಿಯಿಂದ ಆಯೋಜಿಸಿದ್ದ ಮಹಿಳಾ ಹಕ್ಕುಗಳ ಬಗ್ಗೆ ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ವಿಶ್ವದೆಲ್ಲೆಡೆ ಇಂದು ಮಹಿಳೆಯರ ಮೇಲಿನ ದೌರ್ಜನ್ಯಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತಿರುವುದು ವಿಷಾದನೀಯ. ಮಹಿಳಾ ಹಕ್ಕುಗಳನ್ನು ಸಂರಕ್ಷಿಸುವುದರ ಜೊತೆಗೆ ದೌರ್ಜನ್ಯ ಮುಕ್ತ ಸಮಾಜ ನಿರ್ಮಾಣವಾಗಬೇಕಾದರೆ ಸ್ತ್ರೀ ಸಂವೇದನೆಯ ವಿಷಯಗಳು ಹೆಚ್ಚು ಹೆಚ್ಚು ಚರ್ಚೆಗೆ ಬರಬೇಕು. ಇಂತಹ ಕಾರ್ಯಕ್ರಮಗಳು ಎಲ್ಲ ಕಡೆ ಮತ್ತು ಮುಖ್ಯವಾಗಿ ವಿದ್ಯಾಸಂಸ್ಥೆಗಳಲ್ಲಿ ಹೆಚ್ಚೆಚ್ಚು ನಡೆಯುವಂತಾಗಬೇಕು. ಮಹಿಳೆಯರು ನಾಚಿಕೆ ಸಂಕೋಚ ಹಾಗೂ ಭಯ ಪಡದೆ ಕಾನೂನು ತಜ್ಞರ ಮತ್ತು ಸಲಹಾ ಮಂಡಳಿಯ ಸದುಪಯೋಗ ಪಡೆಯುವಂತಾಗಬೇಕು ಎಂದು ಅಭಿಪ್ರಾಯಿಸಿದರು.

ವಿಶೇಷ ಉಪನ್ಯಾಸ ನೀಡಿದ ವಕೀಲರು ಹಾಗೂ ಕಾಲೇಜಿನ ಹಿರಿಯ ವಿದ್ಯಾರ್ಥಿ ವೇದಿಕೆ ಅಧ್ಯಕ್ಷರಾದ ಶ್ರೀಮತಿ ನಿರ್ಮಲ ಮಧುಸೂದನ್‌ರವರು ದಿನನಿತ್ಯ ಲೈಂಗಿಕ ಶೋಷಣೆ ಗಳೊಳಗಾಗುವ ಎಷ್ಟೋ ಮಹಿಳೆಯರು ಮಾನಸಿಕವಾಗಿ ಚಿತ್ರಹಿಂಸೆ ಅನುಭವಿಸುತ್ತಿದ್ದಾರೆ. ಮಹಿಳೆಯರನ್ನು ಧರ್ಮದ ಹೆಸರಿನಲ್ಲಿ, ಜಾತಿಯ ಆಧಾರದ ಮೇಲೆ, ಸಂಪ್ರದಾಯ ಕಟ್ಟುಪಾಡುಗಳ ಹೆಸರಿನಲ್ಲಿ ನಿರಂತರ ನಿಯಂತ್ರಣಗಳನ್ನು ತರುವ ಪ್ರಯತ್ನ ನಡೆಯುತ್ತಿದೆ. ಸದಾಕಾಲವೂ ಆಕೆಯನ್ನು ತಮ್ಮ ಹತೋಟಿಯಲ್ಲಿಡಬೇಕೆಂಬ ವಾತಾವರಣವೂ ನಿರ್ಮಾಣವಾಗುತ್ತಿರುವುದು ಬೇಸರದ ಸಂಗತಿ. ಮಹಿಳೆಯರ ಮೇಲಿನ ದೌಜನ್ಯಗಳು ನಿಲ್ಲಬೇಕೆಂದರೆ ಮಹಿಳೆಯರು ಶಿಕ್ಷಿತರಾಗಿ, ಕಾನೂನಿನಲ್ಲಿ ಇವರಿಗಿರುವ ಹಕ್ಕುಗಳ ಬಗೆಗೆ ತಿಳಿದುಕೊಳ್ಳಬೇಕು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಪ್ರೊ. ಉಮೇಶ ಒಂದು ಸ್ವಾಸ್ಥ್ಯ ಸಮಾಜ ನಿರ್ಮಾಣವಾಗಬೇಕಾದರೆ ಅಲ್ಲಿ ಎಲ್ಲರ ಭಾಗವಹಿಸುವಿಕೆ ಮುಖ್ಯ. ಸ್ತ್ರೀ ಪುರುಷರಿಬ್ಬರಿಗೂ ಸಮನಾಗಿ ಬಾಳುವಂತಹ ವಾತಾವರಣ ನಿರ್ಮಾಣವಾಗಬೇಕಿದೆ. ಮುಂದಿನ ಪೀಳಿಗೆಯು ದೌರ್ಜನ್ಯ ಮುಕ್ತವಾಗಿರಬೇಕೆಂದು ವಿಶ್ವಸಂಸ್ಥೆಯೂ ಸಹ ಮಹಿಳೆಯರ ಮೇಲಿನ ದೌರ್ಜನ್ಯಗಳ ವಿರುದ್ದ ಸಮರ ಸಾರಿ ಪ್ರತೀ ವರ್ಷ ನವೆಂಬರ್ 25ರಂದು ಮಹಿಳೆಯರ ಮೇಲಿನ ದೌರ್ಜನ್ಯ ನಿರ್ಮೂಲನೆಯ ಅಂತರಾಷ್ಟ್ರೀಯ ದಿನವನ್ನಾಗಿ ಆಚರಿಸಬೇಕೆಂದು ಕರೆ ನೀಡಿರುವುದನ್ನು ಸ್ಮರಿಸಬಹುದಾಗಿದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಶ್ರೀ ಟಿ ಶ್ರೀಕಾಂತ್, ಗೌರವಾನ್ವಿತ ಅಪರ ಸಿವಿಲ್ ನ್ಯಾಯಾದೀಶರು, ಶ್ರೀ ಡಿ ಎಸ್ ಬಸವರಾಜು, ಅಧ್ಯಕ್ಷರು, ವಕೀಲರ ಸಂಘ, ವಕೀಲೆ ಶ್ರೀಮತಿ ಸೀಮಾ ತಹಸ್ಲೀನ್ ಸುಲ್ತಾನ್ ರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕು. ಸೌಮ್ಯ ಆರ್ ಸ್ವಾಗತಿಸಿ, ವಂದಿಸಿದರು.

ತಾಲ್ಲೂಕು ಕಾನೂನು ಸೇವೆಗಳ ಸಮಿತಿ ಮತ್ತು ವಕೀಲರ ಸಂಘದ ಸಹಯೋಗದೊಂದಿಗೆ ಕಾಲೇಜಿನ ''ಮಹಿಳೆಯರ ಲೈಂಗಿಕ ಕಿರುಕುಳ ತಡೆ ಸಮಿತಿ'' ವತಿಯಿಂದ ಆಯೋಜಿಸಿದ್ದ ಮಹಿಳಾ ಹಕ್ಕುಗಳ ಬಗ್ಗೆ ಕಾನೂನು ಅರಿವು ಕಾರ್ಯಕ್ರಮವನ್ನು ಶ್ರೀ ಎಸ್ ಜೆ ಕೃಷ್ಣ ರವರು ಉದ್ಘಾಟಿಸಿದರು. ಚಿತ್ರದಲ್ಲಿ ಶ್ರೀಮತಿ ನಿರ್ಮಲ ಮಧುಸೂದನ್, ಪ್ರಾಚಾರ್ಯ ಪ್ರೊ. ಉಮೇಶ, ಶ್ರೀ ಟಿ. ಶ್ರೀಕಾಂತ್ ಮತ್ತು ಶ್ರೀ ಡಿ ಎಸ್ ಬಸವರಾಜು ರವರನ್ನು ಕಾಣಬಹುದು.



ತಾಲ್ಲೂಕು ಕಾನೂನು ಸೇವೆಗಳ ಸಮಿತಿ ಮತ್ತು ವಕೀಲರ ಸಂಘದ ಸಹಯೋಗದೊಂದಿಗೆ ಕಾಲೇಜಿನ ''ಮಹಿಳೆಯರ ಲೈಂಗಿಕ ಕಿರುಕುಳ ತಡೆ ಸಮಿತಿ'' ವತಿಯಿಂದ ಆಯೋಜಿಸಿದ್ದ ಮಹಿಳಾ ಹಕ್ಕುಗಳ ಬಗ್ಗೆ ಕಾನೂನು ಅರಿವು ಕಾರ್ಯಕ್ರಮವನ್ನು ಶ್ರೀ ಎಸ್ ಜೆ ಕೃಷ್ಣ ರವರು ಉದ್ಘಾಟನಾ ಭಾಷಣ ಮಾಡುತ್ತಿರುವುದು. ಚಿತ್ರದಲ್ಲಿ ಶ್ರೀಮತಿ ನಿರ್ಮಲ ಮಧುಸೂದನ್, ಪ್ರಾಚಾರ್ಯ ಪ್ರೊ. ಉಮೇಶ, ಶ್ರೀ ಟಿ. ಶ್ರೀಕಾಂತ್, ಶ್ರೀ ಡಿ ಎಸ್ ಬಸವರಾಜು ಮತ್ತು ಶ್ರೀಮತಿ ಸೀಮಾ ತಸ್ಲೀನ್ ಸುಲ್ತಾನ್‌ರವರನ್ನು ಕಾಣಬಹುದು.

